# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
## ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ:997/10/14/2021** C/w
**1247/10/14/2021, 1196/10/14/2021, 1195/10/15/2021** &
**1964/10/14/2021(B –3)**

**ದಿನಾಂಕ: 18–11–2021**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

ಶ್ರೀ ವಿಜಯ್ ಸತ್ಯಸಾಯಿ.ಕೆ,
ಬಿನ್ ಲೇಟ್ ಡಿ.ಕೆ.ಕೆಂಪೇಗೌಡ,
ನಂ.305, 'ನೇತ್ರಾ' ನೇತ್ರಾವತಿ ರಸ್ತೆ,
9ನೇ ಕ್ರಾಸ್, ವಿ.ವಿ ನಗರ,
ಕಲ್ಲಹಳ್ಳಿ ಬಡಾವಣೆ,
ಮಂಡ್ಯ ಜಿಲ್ಲೆ–571 401.

## ಆದೇಶ

ದೂರುದಾರರಾದ ಶ್ರೀ ವಿಜಯ್ ಸತ್ಯಸಾಯಿ ರವರು ಆಯೋಗಕ್ಕೆ ಸಲ್ಲಿಸಿದ್ದ ದೂರಿನಲ್ಲಿ ತನ್ನ ಮಗ ಶ್ರೀ ಜಯಂತ್ ರವರು ನಿರಪರಾಧಿಯಾಗಿದ್ದರೂ ಸಹಾ ಶ್ರೀ ಜಯಪ್ರಕಾಶ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಹೆಚ್.ಡಿ. ಜಯಪ್ರಕಾಶ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಹೆಚ್.ಡಿ ಕೋಟೆ ತಾಲ್ಲೂಕು, ಬೀಚನಹಳ್ಳಿ ರವರು ಉದ್ದೇಶಪೂರ್ವಕವಾಗಿ ತನ್ನ ಮಗನ ಮೇಲೆ ಸುಳ್ಳು ದಾಖಲೆ ಮತ್ತು ಹೇಳಿಕೆಗಳನ್ನು ಸೃಷ್ಟಿಸಿ ತನ್ನ ಮಗನನ್ನು ಹಿಡಿಯುವ ನೆಪದಲ್ಲಿ ಕಾಲಿಗೆ ಎರಡು ಗುಂಡುಗಳನ್ನು ಹಾರಿಸಿದ್ದಾರೆ. ಪ್ರಸ್ತುತ ತನ್ನ ಮಗ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆಂದು ಇತ್ಯಾದಿಯಾಗಿ ದೂರಿನಲ್ಲಿ ತಿಳಿಸಿದ್ದಾರೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದೂರುದಾರರು ಆಯೋಗಕ್ಕೆ ಇನ್ನು ಮೂರು ದೂರರ್ಜಿಗಳನ್ನು ಸಲ್ಲಿಸಿದ್ದು, ಅವುಗಳನ್ನು ಒಟ್ಟುಗೂಡಿಸಲಾಗಿದೆ.

ಈ ದೂರಿನ ಪ್ರತಿಯನ್ನು ಆಯೋಗದ ಐಪಿಜಿ ಇವರಿಗೆ ಕಳುಹಿಸಿದ್ದು, ದೂರುದಾರರು ಮಾಡಿರುವ ಆಪಾದನೆಗೆ ಸಂಬಂಧಿಸಿದಂತೆ ಸಾಕ್ಷಿದಾರರು ಮತ್ತು ಪೊಲೀಸ್ ಅಧಿಕಾರಿಗಳ ಹೇಳಿಕೆಯನ್ನು ಹಾಗೂ ದಾಖಲಾತಿಗಳನ್ನು ಪಡೆದು ಪರಿಶೀಲಿಸಲಾಗಿ, ದೂರುದಾರರ ಮಗ ಶ್ರೀ ಜಯಂತ್ ವಿ. ಗೌಡನು ಎಂ.ಬಿ.ಎ ವಿದ್ಯಾರ್ಥಿಯಾಗಿದ್ದು, ಈತನ ವಿರುದ್ಧ 1) ಶ್ರೀರಂಗಪಟ್ಟಣ ಟೌನ್ ಮೊ.ಸಂ.14/2021, ಕಲಂ 302, 201 ಐಪಿಸಿ, 2) ಮಂಡ್ಯ ಟೌನ್ ಪೊಲೀಸ್ ಠಾಣಾ ಮೊ.ಸಂ.37/2021, ಕಲಂ 302, 201 ಐಪಿಸಿ 3) ಬಿಳಿಕೆರೆ ಪೊಲೀಸ್ ಠಾಣಾ ಮೊ.ಸಂ.19/2021, ಕಲಂ 504, 323, 341, 307, 353, 332 ರೆ/ವಿ 34 ಐಪಿಸಿ ಹಾಗೂ 4) ಮೊ.ಸಂ.37/2021 ಕಲಂ 353, 332, 307 ಐಪಿಸಿ ಪ್ರಕರಣಗಳಲ್ಲಿ ಆರೋಪಿಯಾಗಿರುತ್ತಾನೆ. ಈತನು ಮಂಡ್ಯದ ಕುಖ್ಯಾತ ರೌಡಿಶೀಟರ್ ಜಡೇಜ ರವಿ ಮತ್ತು ಡೇಂಜರ್ ಶಿವನ ಸಹಚರನಾಗಿರುವುದು ಹೇಳಿಕೆಗಳಿಂದ ತಿಳಿದುಬಂದಿರುತ್ತದೆ.

ಮೇಲ್ಕಂಡ ಎಲ್ಲಾ ಹೇಳಿಕೆ ಮತ್ತು ದಾಖಲಾತಿಗಳಿಂದ ದೂರುದಾರರ ಮಗನಾದ ಜಯಂತ್ ವಿ.ಗೌಡ ವಿರುದ್ಧ ಮಂಡ್ಯ ನಗರ, ಶ್ರೀರಂಗಪಟ್ಟಣ, ಬಿಳಿಕೆರೆ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಜಯಂತ್ ವಿ.ಗೌಡರು ಪೊಲೀಸರ ಮೇಲೆ ದಾಳಿ ಮಾಡಿದಾಗ ಆತ್ಮರಕ್ಷಣೆಗೆ ಗುಂಡು ಹಾರಿಸಿದ್ದಾಗಿ ಪೊಲೀಸರ ಹೇಳಿಕೆಗಳಿಂದ ಕಂಡು ಬಂದಿರುತ್ತದೆ. ಪ್ರಸ್ತುತ ಈತನು ಮೈಸೂರು ಕೇಂದ್ರ ಕಾರಾಗೃಹದಲ್ಲಿರುತ್ತಾನೆ. ಈತನ ವಿರುದ್ಧ ಪೊಲೀಸರು ಸುಳ್ಳು ಪ್ರಕರಣ ದಾಖಲಿಸಿ, ಅನಾವಶ್ಯಕವಾಗಿ ಕಾಲಿಗೆ ಗುಂಡು ಹೊಡೆದು ಶಾಶ್ವತ ಅಂಗವಿಕಲನನ್ನಾಗಿ ಮಾಡಿರುತ್ತಾರೆಂದು ಶ್ರೀ ವಿಜಯ್ ಸತ್ಯಸಾಯಿ ಮತ್ತು ಶ್ರೀಮತಿ ನೇತ್ರಾವತಿ ರವರು ಆರೋಪಿಸಿದ್ದು, ಈ ಸಂಬಂಧ ಅವರ ಹೇಳಿಕೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಸಾಕ್ಷಾಧಾರಗಳು ಕಂಡು ಬಂದಿರುವುದಿಲ್ಲ ಎಂಬ ಅಭಿಪ್ರಾಯ ವರದಿಯೊಂದಿಗೆ ವಿಚಾರಣಾ ಕಾಲದಲ್ಲಿ ದಾಖಲಿಸಿದ ಹೇಳಿಕೆ ಮತ್ತು ಸಂಗ್ರಹಿಸಿದ ದಾಖಲಾತಿಗಳನ್ನು ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಆಯೋಗಕ್ಕೆ ಸಲ್ಲಿಸಿದೆ.

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ದೂರುದಾರರು ಅಭಿಪ್ರಾಯ ಸಲ್ಲಿಸಿದ್ದಾರೆ.

ದೂರುದಾರರು ಆಯೋಗದ ಐಜಿಪಿ ರವರು ಸಲ್ಲಿಸಿರುವ ವರದಿಯಲ್ಲಿ ನೀಡಿರುವ ಎಲ್ಲಾ ಸಾಕ್ಷಿಧಾರರ ಹೇಳಿಕೆಗಳನ್ನು ಅಲ್ಲಗಳೆದಿದ್ದಾರೆ. ಮುಂದುವರೆದು ಉದ್ದೇಶಪೂರ್ವಕವಾಗಿ ತನ್ನ ಮಗನ ಮೇಲೆ ಸುಳ್ಳು ದಾಖಲೆ ಮತ್ತು ಹೇಳಿಕೆಗಳನ್ನು ಸೃಷ್ಟಿ ಮಾಡಿದ್ದಾರೆ. ತನ್ನ ಮಗ ನಿರಪರಾಧಿಯಾಗಿದ್ದರೂ

ಸಹ ತನ್ನ ಮಗನನ್ನು ಅಪರಾಧಿಯನ್ನಾಗಿ ಮಾಡುವ ದುರುದ್ದೇಶದಿಂದ ತನ್ನ ಮಗನನ್ನು ಹಿಡಿಯುವ ನೆಪದಲ್ಲಿ ಕಾಲಿಗೆ ಎರಡು ಗುಂಡುಗಳನ್ನು ಹಾರಿಸಿ ಅಂಗವಿಕಲನನ್ನಾಗಿ ಮಾಡಿದ್ದಾರೆ. ಈ ಬಗ್ಗೆ ನನ್ನ ಮತ್ತು ನನ್ನ ಮಗನಿಗೆ ನ್ಯಾಯ ಹಾಗೂ ನನ್ನ ಮಗನಿಗೆ ಸೂಕ್ತ ಪರಿಹಾರವನ್ನು ಕೊಡಿಸಿಕೊಡಬೇಕಾಗಿ ಕೋರಿ ಅಭಿಪ್ರಾಯ ಸಲ್ಲಿಸಿದ್ದಾರೆ.

ದೂರು, ವರದಿ ಹಾಗೂ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ದೂರುದಾರರ ಮಗನ ಮೇಲೆ ಈಗಾಗಲೇ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿದ್ದು, ಸದರಿ ಪ್ರಕರಣಗಳು ಮಾನ್ಯ ನ್ಯಾಯಾಲಯದಲ್ಲಿರುವುದರಿಂದ ಆಯೋಗದ ನಿಯಮಾವಳಿ 9(h) ರನ್ವಯ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

Sd/-
(ಆರ್.ಕೆ. ದತ್ತ)
ಸದಸ್ಯರು

GS